

ಈ ಚಿನ್ನದ ಮೀನಿಗೆ ಪಾರದರ್ಶಕ ಉಡುಗೆ. ಇದರ ಡಿಸೈನರ್ ಜಪಾನಿನ ವಿಜ್ಞಾನಿಗಳು. ಯುವತಿಯರು ಹೃದಯವಿರುವ ಜಾಗ ಪ್ರದರ್ಶಿಸಲು ಏನೆಲ್ಲಾ ಕಸರತ್ತು ನಡೆಸುತ್ತಿದ್ದಾರೆ. ಆದರೆ ಈ ಚಿನ್ನದ ಮೀನಿನ ಹೃದಯ, ಅದರ ಬಡಿತ ಪಾರದರ್ಶಕ ತ್ವಚೆಯೊಳಗಿಂದ ನೋಡುವವರ ಹೃದಯದ ಬಡಿತ ನಿಲ್ಲಿಸುತ್ತದೆ. ಯುವತಿಯರ ಮುಂದಿನ ಪೈಪೋಟಿ ಚಿನ್ನದ ಮೀನಿನ ಜೊತೆಗಾ?

ಅರ್ಜೆಂಟೀನಾದಲ್ಲಿ ಹೊಸ ವರ್ಷದ ಕೊಡುಗೆ ಸಲಿಂಗಿಗಳ ಮದುವೆ. 7 ವರ್ಷಗಳ ಹಿಂದೆಯೇ ಸರ್ಕಾರ ಈ ಬಗ್ಗೆ ಅನುಮತಿ ನೀಡಿದ್ದರೂ ಮೊದಲ ಸಲಿಂಗಿ ಜೋಡಿ ಸಪ್ತಪದಿ ತುಳಿದಿದ್ದು ಈಗ. ನಾಟಿಂಗ್‌ಹ್ಯಾಮ್‌ಶೈರ್‌ನಲ್ಲೂ ಇದೇ ಹೊಸ ವರ್ಷದ ಕೊಡುಗೆ. ಮಧ್ಯರಾತ್ರಿಯೇ ನೋಂದಣಿ ಕಚೇರಿ ಮುಂದೆ ಜೋಡಿಗಳ ಕ್ಯೂ.



ದೆಹಲಿಯ ಈ ಹೈದ ಚೀನಾದ ಮಕಾವ್‌ನಲ್ಲಿ ಸ್ನೇಹಿತೆ ಜೊತೆ ಹೊಸ ವರ್ಷಾಚರಣೆ ಕನಸು ಕಂಡಿದ್ದ. ಆದರೆ ಈಗ ಜೈಲಿನಲ್ಲಿ ಸೊಳ್ಳೆ, ತಿಗಣೆಗಳ ಜೊತೆ 2010ರ ಆಚರಣೆಯ ಭಾಗ್ಯ. ಈ ಪವನ್ ವರ್ಮಾ ಮಕಾವ್‌ಗೆ ಹೋಗಲು ತನ್ನ ಅಪಹರಣ ನಾಟಕದ ಸ್ಕ್ರಿಪ್ಟ್ ಅನ್ನು ತಾನೇ ಬರೆದ. ಅಪಹರಣದ ಹಣ 20 ಲಕ್ಷ ರೂಪಾಯಿಯನ್ನು ಪಡೆಯಲು ಹೋದಾಗ ಪೊಲೀಸರ ಕೈಗೆ ಸಿಕ್ಕಿಬಿದ್ದ. ಈಗ ದೂರು ಕೊಟ್ಟ ಅಪ್ಪ ಜೈಲಿಂದ ಬಿಡಿಸಿದರೆ ಮಾತ್ರ ನಾಟಕ ಸುಖಾಂತ್ಯ.

ಇಸ್ರೇಲ್‌ನ ಹೆಝಿಗೆ ಹಿಮಕರಡಿ ಪ್ರೇರಣೆ ಇರಬಹುದು ಅಥವಾ ಚಿಕ್ಕವನಿದ್ದಾಗ ಫ್ರಿಡ್ಜ್ ಒಳಗೆ ಕುಳಿತುಕೊಂಡು ಅಭ್ಯಾಸ ಮಾಡಿದ್ದನೋ ಏನೋ! 66 ಗಂಟೆ ಕಾಲ ಮಂಜುಗಡ್ಡೆಯೊಳಗೆ ಕೂತು ದಾಖಲೆ ಮಾಡಿದ್ದಾನೆ.



ಬ್ರಿಟನ್ನಿನ ಗೋಪಾಲಕರು ತಮ್ಮ ಹಸುಗಳಿಗೆ ಹೆಸರಿಟ್ಟು ಹೆಚ್ಚು ಹಾಲು ಕರೆಯುತ್ತಿದ್ದಾರಂತೆ. ಹೊಸ ಸಂಶೋಧನೆಯೇನಲ್ಲ ಬಿಡಿ. ನಮ್ಮ ಗಂಗೆ ಬಾರೆ, ತುಂಗೆ ಬಾರೆ ಪೇಟೆಂಟ್ ಕದಿಯುವ ಚಟ ವಿದೇಶೀಯರಿಗೆ!



ಅಮೆರಿಕದ ಅಧ್ಯಕ್ಷ ಒಬಾಮ ಹವಾಯ್‌ನಲ್ಲಿ ವರ್ಷದ ಕೊನೆ ಕಳೆದರು. ರಜಾದಲ್ಲೂ ರಾಜನೀತಿಯೇ ಎಂಬ ಕುತೂಹಲ ಛಾಯಾಗ್ರಾಹಕರದ್ದು. ಕ್ಯಾಮೆರಾ ಕ್ಲಿಕ್ಕಿಸಿದ ಮೇಲೆ ಗೊತ್ತಾಯ್ತು- ಅವರೂ ನಮ್ಮ ಹಾಗೆ ಹೆಡ್‌ಫೋನಿನಲ್ಲಿ ಸಂಗೀತ ಆಲಿಸುತ್ತ, ಪಕ್ಕದಲ್ಲಿರುವ ಹೆಂಡತಿಯ ವಟವಟ ಕೇಳಿದಂತೆ ನಟಿಸುತ್ತ..

ಚೆಂಡು ಮತ್ತು ಸ್ಟಿಕ್ ಬದಲು ಯುವತಿಯರ ಜೊತೆ ಗಾಲ್ಫ್ ಆಡಲು ಹೋಗಿ ಅಪಘಾತ ಮಾಡಿಕೊಂಡ ಟೈಗರ್ಸ್ ವುಡ್ಸ್ ಈಗೇನು ಮಾಡುತ್ತಿದ್ದಾನೆ? ಮೆಕ್ಸಿಕೋದಲ್ಲಿ ವಯಾಗ್ರಾಗೆ ಸಮನಾದ ಟಿಯಾಗ್ರಾ ಮಾರಾಟ ಮಾಡುತ್ತಿದ್ದಾನೆ. 'ಮೆಕ್ಸಿಕೊ ಹೆಂಗಳೆಯರೇ ಪ್ರಪಂಚದ ಅತ್ಯಂತ ಚೆಲುವೆಯರು' ಎಂಬ ಪ್ರಚಾರ ವಾಕ್ಯ ಬೇರೆ. ಹಾಗಂತ ಮೆಕ್ಸಿಕೋದ ಮೂರ್ಖರ ದಿನವಾದ ಡಿ.28ರಂದು ಎಲ್ಲಾ ಕಡೆ ಜಾಹೀರಾತು ಕಾಣಿಸಿಕೊಂಡಿದೆ.

ನಾರ್ವೆಯ ಯುವಕ ಹೆದ್ದಾರಿಯಲ್ಲಿ ಭಾರಿ ವೇಗದಲ್ಲಿ ಕಾರು ಓಡಿಸಿ ಪೊಲೀಸರ ಕೈಗೆ ಸಿಕ್ಕಿಬಿದ್ದ. ಪೊಲೀಸರು ಬಂಧಿಸಿ ಎಫ್‌ಐಆರ್ ಜಡಿದರು. ಜೈಲುವಾಸ ವೇಗದ ಚಾಲನೆಗಲ್ಲ, ಚಾಲನೆ ಮಾಡುತ್ತಲೇ ಸ್ನೇಹಿತೆಯ ಜೊತೆ ಪ್ರೀತಿ-ಪ್ರೇಮದಾಟ ನಡೆಸಿದ್ದಕ್ಕೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65